ಅವರಿಗೆ ಭೂಮಿ ಕೊಡುವುದರಲ್ಲಿ ಯಾರೂ ಸಹ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಇದಕ್ಕೋಸ್ಕರ ವಿಶೇಷ ಅಧಿವೇಶನ ಕೂಡಾ ಕರೆಯಬೇಕೆಂದು ಹೇಳಿದ್ದೇವೆ. ಉದ್ದೇಶಪೂರ್ವಕವಾಗಿ ಇದನ್ನು ಇಟ್ರಡ್ಯೂಸ್ ಮಾಡಿ ಪಾಸ್ ಮಾಡದ ರಾಜ್ಯದ ಮಾಜಿಯವರೆ ಲಕ್ಷ ಜನರಿಗೆ ಜಮೀನು ಮಂಜೂರು ಆಗಿದ್ದರೆ ಅವರು ಸಾಲಸೋಲ ತೆಗೆದುಕೊಂಡು ಗೌರವದಿಂದ ಜೀವನ ಮಾಡುವುದಕ್ಕೆ ಏನು ಸಹಾಯ ವಾಗುತ್ತಿತ್ತು ಅದನ್ನು ತಪ್ಪಿಸಿದ್ದಿರಿ. ಈಗಾಗಲೇ ಬಿಲ್ ಇಟ್ರಡ್ಯೂಸ್ ಮಾಡಿರುವುದರಿಂದ ಆ ಬಿಲ್‌ನಲ್ಲಿ ಕಾಫಿ ಪ್ಲಾಂಟರ್ಸ್ ಕೈಬಿಟ್ಟ ಕಡಿಬಿಡವರಿಗೆ ಜಮೀನನ್ನು ಖಾಯಂ ಮಾಡುವ ಬಗ್ಗೆ ತಿದ್ದುಪಡಿ ತಂದು ಇವತ್ತಿನ ಈ ಸದನದಲ್ಲಿ ಇಂಟ್ರಡ್ಯೂಸ್ ಮಾಡಿ ಪಾಸ್ ಮಾಡಿ ಈ ಸದನದಲ್ಲಿ ಮಂಜೂರಾತಿ ಪಡೆಯಬೇಕೆಂದು ಹೇಳುತ್ತೇನೆ.

ಶ್ರೀ ಕೃಷ್ಣ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಮಂತ್ರಿಮಂಡಲದ ಶ್ರೀಗಳು ಎಲ್ಲಾ ಪಕ್ಷದ ಸದಸ್ಯರನ್ನು ಕರೆದು ವಿಚಾರ ಮಾಡಿ ಅದನ್ನು ಪಾಸ್ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದರು. ಆದರೆ ಯಾವ ಕಾರಣಕ್ಕೋಸ್ಕರ ಸದಸ್ಯರನ್ನು ಭೇಟಿಯಾಗುವುದಕ್ಕೆ ಆಗಿಲ್ಲ ಎಂದು ನಾನು ಆಗಲೇ ಹೇಳಿದ್ದೇನೆ. ಆದಷ್ಟು ಜಾಗ್ರತೆ ಎಲ್ಲಾ ಪಕ್ಷಗಳ ಸದಸ್ಯರನ್ನು ಕರೆದು ಚರ್ಚೆ ಮಾಡಿ ಆದಷ್ಟು ಜಾಗ್ರತೆ ಸರ್ಕಾರ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಂದು ನಾನು ಹೇಳುತ್ತೇನೆ.

೩) ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರ ವರ್ಗದವರು ಹರಿಹರ ಪಾಲಿಫೈಬರ್ಸ್ ಸಂಸ್ಥೆಗೆ ನೀಲಗಿರಿ ಮರಗಳನ್ನು ಮಾರಾಟ ಮಾಡುವಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರ ವರ್ಗದವರು ಹರಿಹರ ಪಾಲಿಫೈಬರ್ಸ್ ಸಂಸ್ಥೆಗೆ ನೀಲಗಿರಿ ಮರಗಳನ್ನು ಮಾರಾಟ ಮಾಡುವಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ವ್ಯವಸಾಯ ಹಾಗೂ ಅರಣ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕ ವಿಷಯದ ಬಗ್ಗೆ ನಾನ ಈ ಕೆಳಕಂಡ ಹೇಳಿಕೆ ಕೊಡಬಯಸುತ್ತೇನೆ.

T'ere is no proposal whatsoever for the University of Agricultural Sciences, Bangalore to sell Eucalyptus trees to Harihar Polyfibres. Hence, the question of the University authorities misusing the powers vested in them to unauthorisedly sell the Eucalyptus trees to Harihar Polyfibres does not arise. Presumably. the Hon'ble members is seeking to draw the attention of the Minister for Agriculture and Forests to the matter relating to the disposal of Eucalyptus trees in favour of Mysore Paper Mills Ltd., Bhadravathi. The facts of the case are as follows :

(5) The scattered Eucalyputs tree growth existing on an area of about 700 acres at G.K.V.K. was fully matured and the same was decided to be disposed off to meet the essential development experditure. The approximate yield thet was expected was around 6000 to 7000 M. Tonnes. The Mysore Paper Mills Ltd., Bhadravathi, a Government of Karnataka undertaking approached the University to dispose off the Eucalyptus trees in their favour by offering Rs. 250 per M. Tonne. The University did not accept the offered

rate, but in consultation with the Director of Forest. Mysore Paper Mills Ltd., and also with the Karnataka Government Forest Department, they insistated to buy at the rate of Rs. 385 per M. Tonne. Accordingly, with the approval of the Vice-Chancellor, the offic rs of the University of Agricultural Sciences signed a Memorandum of Understanding with Mysore Paper Mills Ltd., on 17-5-1988 to sell the Eucalyptus at the rate of Rs. 385 per M. Tonne.

(2) As per the Karnataka Universities of Agricultural Sciences Act, it is only the Board of Regents, which is empowered to decide about disposal of moveable properties and not the officers of the University. Hence, this issue was taken up for discussion in the Board of Regents meeting on 17-8-1988. The Board came to the conclusion that the Memorandum of Understanding entered into was void.

(3) Further, the Board of Regents authorised the University to renegotiate with Mysore Paper Mills Ltd., for a higher rate as per the latest orders of the Government of Karnataka and if the higher rate was acceptable to, then enter a fresh Memorandum of Understanding.

(4) The Mysore Paper Mills Ltd., subsequently agreed to pay the higher rate of Rs. 490 per M. Tonne as per the Government of Karnataka's orders of 3rd June, 1988.

(5) Thereafter, a revised Memorandum of Understanding was prepared and the draft was provided to the Mysore Paper Mills on 6-9-1988. One change was introduced in the draft to the effect that the material would be sold on actual weight basis instead of the assumed weight of one Tonne per stack.

(6) Before the matter could be finalised, Mysore Paper Mills had moved the City Civil Court seeking permanent injunction restraining the University from committing breach of the earlier Memorandum of Understanding dated 17-5-1988.

(7) Very recently, the authorities of Mysore Paper Mills have approached the Vice-Chancellor and other officers of the University of Agricultural Sciences and informed them that they had gone to the Court on the mistaken presumption that the University authorities were perhaps not going to enter into an agreement with Mysore Paper mills at all. The matter is now under detailed discussion between the University and the Mysore Paper Mills authorities and it is expected that a settlement will be reached out of courts. According to this settlement the disposal of Eucalyptus will be entirely on the terms approved by the Board of Regents and a fresh

agreement would be entered into as per the provisions of the University of Agricultural Science Act.

(8) It will thus be seen that the disposal of the Eucalyptus has been considered by the Board of Regents and that the proposed course of action would be on the lines suggested by the Board of Regents did not consider that the calling of tenders was necessary because in a tender situation it was likely that a middle-man might purchase the trees for resale or that users from outside Karnataka who have no long-term stake in the development of our forest resources might come in. With Mysore Paper Mills Ltd., the consideration was that it was an actual user in which the Government of Karnataka has considerable stake and that the raw meterial would be used within Karnataka itself. Further, it would also be seen that the Eucalyptus trees are being disposed off as per the rates of the Forest Department currently in force. In fact, in respect of recent contracts, the equivalent price paid by Mysore Paper Mills is stated to be of the order of Rs. 385 per MT as against which the University would now be getting Rs. 490 per MT. Thus financially also there no disadvantage to the University.

† ಶ್ರೀ ಬಿ. ಲಕ್ಕಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ ಏನಿದೆ ಇದು ಪತ್ರಕ್ಕೆ ಬಹಳ ದೂರವಾದ ಉತ್ತರ. ಇಲ್ಲಿ ಮೊದಲನೆಯದಾಗಿ ಅಧಿಕಾರಿಗಳು ಬೋರ್ಡ್ ಆಫ್ ರೀಜೆಂಟ್ಸ್‌ಗೆ ಈ ವಿಚಾರವನ್ನು ಗಮನಕ್ಕೆ ತರದೆ, ಅವರೇ ನಿರ್ಣಯವನ್ನು ತೆಗೆದುಕೊಂಡರು. ಈ ನಿರ್ಣಯದಲ್ಲಿ ೭೦೦ ಎಕರೆ ಭೂಮಿಯಲ್ಲಿ ಬೆಳೆದಿರತಕ್ಕ ಮರಗಳನ್ನು ಮಾರಾಟ ಮಾಡತಕ್ಕ ಕಾಲದಲ್ಲಿ ಅವರು ಅನುಸರಿಸಬೇಕಾದ ಯಾವುದೇ ನಿಯಮವನ್ನು ಅನುಸರಿಸಲಿಲ್ಲ. ಒಂದನೆಯದು ಟೆಂಡರ್ ಕರೆದಿಲ್ಲ ಎರಡನೆಯದು ಬೋರ್ಡ್ ಆಫ್ ರೀಜೆಂಟ್ಸ್‌ನ ಅಪ್ರೂವ್ ಪಡೆದಿಲ್ಲ. ೭೦೦ ಎಕರೆಯಲ್ಲಿ ಇರತಕ್ಕ ಮರಗಳನ್ನು ಮಾರಾಟ ಮಾಡತಕ್ಕ ಕಾಲದಲ್ಲಿ ಬೋರ್ಡ್‌ನ ಒಪ್ಪಿಗೆಯನ್ನು ಇವರು ಪಡೆಯಬೇಕಾಗಿತ್ತು, ಅದನ್ನು ಇವರು ಪಡೆಯಲಿಲ್ಲ. ಕೆಲವು ಜನ ಅಧಿಕಾರಿಗಳು ಸೇರಿಕೊಂಡು ಏನು ಮಾಡಿದರು ಅಂದರೆ ೩೫೫ ರೂಪಾಯಿ ರೇಟಿನಂತೆ ಮಾರಾಟ ಮಾಡುವುದಕ್ಕೆ ಮೂರು ಅಗ್ರಿಮೆಂಟ್‌ಗಳನ್ನು ಮಾಡಿಕೊಂಡರು ಇಲ್ಲಿ ಬೋರ್ಡ್ ಆಫ್ ರೀಜೆಂಟ್ಸ್ ಅನ್ನು ಆಗ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಟೆಂಡರ್ ಕರೆಯಲಿಲ್ಲ. ಗೌರ್ನಮೆಂಟ್ ರೇಟ್ ೪೯೦ ರೂಗಳಿದ್ದರೂ ಸಹ ಆ ಪ್ರಕಾರ ಮಾರಾಟ ಮಾಡುವುದಕ್ಕೆ ರೇಟನ್ನು ಫಿಕ್ಸ್ ಮಾಡಲಿಲ್ಲ. ಆ ರೇಟಿಗೂ ಮಾರಲಿಲ್ಲ ಗವರ್ನಮೆಂಟ್ ರೇಟ್‌ನ್ನು ಸಹ ಉಲ್ಲಂಘನೆ ಮಾಡಿ ೩೫೫ ರೂಪಾಯಿ ರೇಟ್ ಅಂತ ಒಪ್ಪಂದ ಮಾಡಿಕೊಂಡರು ಕೊನೆಗೆ ಏನು ಆಯಿತು ಎಂದರೆ ಬೋರ್ಡ್ ಆಫ್ ರಿಜೆಂಟ್ಸ್ ಮುಂದೆ ತೆಗೆದುಕೊಂಡು ಹೋಗಿ ಹೀಗೆಅಗ್ರಿಮೆಂಟ್ ಮಾಡಿಕೊಂಡಿದ್ದೇವೆ, ಅವ್ದರಿಂದ ಒಪ್ಪಬೇಕೆಂದು ಹೇಳಿದ್ದಾರೆ. ಆದರೆ ಅಲ್ಲಿ ವಿರೋಧ ಬಂದಂಥ ಕಾಲದಲ್ಲಿ ೩೮೫ ರೂಪಾಯಿಗೆ ಮುಂದುವರೆಸಿ ಕೊನೆಗೆ ಒಂದು ಒಪ್ಪಂದವಾಗಿದೆ. ಈಗ ಕೋರ್ಟಿಗೆ ಹೋಗಿರತಕ್ಕಂಥದ್ದು ೩೨೫ ರೂಪಾಯಿ ರೇಟ್ ಪ್ರಕಾರ ಮೊದಲನೇ ಅಗ್ರಿಮೆಂಟ್ ಪ್ರಕಾರ ನಮಗೆ ಕೊಡಬೇಕೆಂದು ಹೇಳಿ. ಆದರೆ ಟೆಂಡರ್ ಕರೆಯದೆ ಬೋರ್ಡ್ ಆಫ್ ರಿಜೆಂಟ್ಸ್ ಒಪ್ಪಿಗೆ ಪಡೆಯದೆ ೩೨೫ಕ್ಕೆ ಮೊದಲು ಅಗ್ರಿಮೆಂಟ್‌ನ್ನು ಯಾವ ಕಾನೂನು ಮೇಲೆ ಮಾಡಿಕೊಂಡಿದ್ದೀರಿ ? ಅದನ್ನು ಈಗ ನೀವು ೪೮೫ ರಂತೆ ಕೊಟ್ಟಿರುವಾಗ, ೪೯೦ ರೂ. ರೇಟ್ ಇರುವಾಗ ೧೦೫ ರೂಪಾಯಿ ವ್ಯತ್ಯಾಸ ಬರುತ್ತದೆ.

ಅಧ್ಯಕ್ಷರು.—ವಿವರ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಇಷ್ಟು ವ್ಯತ್ಯಾಸ ಬರುತ್ತದೆ. ಒಂದೊಂದು ಎಕರೆಯೊಳಗೆ ಎಷ್ಟು ಗಿಡಗಳಿವೆ ಎಂದು ಗಿಡಗಳನ್ನು ಎಣಿಸಿಲ್ಲ. ಸೈಜ್ ಏನು ಅಂತ ಹೇಳಿಲ್ಲ, ಗಿಡದ ಎತ್ತರ ಏನು ಅಂತ

ಹೇಳಿಲ್ಲ. ಆ ಗಿಡದಲ್ಲಿ ಬರತಕ್ಕಂಥ ತೊಗಟೆ ಕೊಂಬೆಗಳೇನಿವೆ ಅದರ ಬಗ್ಗೆ ಯಾವುದೇ ಮಾಹಿತಿ ಇಲ್ಲಿ ಇಲ್ಲ. ಗಿಡದಲ್ಲಿ ಬರತಕ್ಕಂಥ ತೊಗಟೆ, ಕೊಂಬೆಗಳನ್ನು ಮಾರಾಟ ಮಾಡಿದರೆ ಒಂದು ಲಾರಿ ಲೋಡ್‌ಗೆ ಆರು ಸಾವಿರ ರೂಪಾಯಿಯಂತೆ ಹೋಗುತ್ತದೆ. ಈಗ ೩೫೦ ಎಕರೆಗೆ ಸುಮಾರಾಗಿ ಕಟ್ ಮಾಡಿದ್ದಾರೆ ಅದು ೪೫ ಲಕ್ಷ ರೂಪಾಯಿಗಳಷ್ಟು ಆಗಿದೆ ೬೫ ಲಕ್ಷ ರೂಪಾಯಿಗಳಷ್ಟು ಗುಡ್ಡೆ ಇಟ್ಟು ಮಾಡಿದ್ದಾರೆ. ಹರಾಜು ಹಾಕಿಲ್ಲ. ಆದ್ದರಿಂದ ಇದರಲ್ಲಿ ಪೇಪರ್ ಮಿಲ್‌ಗೆ ಎಷ್ಟು ಹೋಗಿದೆ ಎಂದು ತಾಪು ತರಿಸಿ ನೋಡಿದರೆ ಗೊತ್ತಾಗುತ್ತದೆ. ಇದು ಪೇಪರ್ ಮಿಲ್‌ಗೆ ಹೋಗಲಿಲ್ಲ ಇದಂ ಹೋಗಿದ್ದು ಹರಿಹರ ಪಾಲಿಫೈಬರ್ಸ್‌ಗೆ, ಹೀಗಾಗಿ ಇದು ಮಾರಾಟ ಮಾಡುವಾಗ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಆದ್ದರಿಂದ ಇಲ್ಲಿ ೩೫೦ ಎಕರೆಯಲ್ಲಿ ೪೫ ಲಕ್ಷ ರೂಪಾಯಿ ಬೆಲೆಯ ಗಿಡಗಳು ಇದ್ದರೆ ಈ ವೇಸ್ಟ್, ಕೊಂಬೆ ಇತ್ಯಾದಿಗಳು ಏನಾಯಿತಂ ? ಇದರ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಈಗ ಕೊಟ್ಟಿರತಕ್ಕಂಥಾದ್ದು ಎಷ್ಟು ಟನ್ ಇದೆ ? ೪೫ ಲಕ್ಷ ರೂಪಾಯಿಗಳು ಈಗ ಏನು ಬಂದಿದೆ ಇದನ್ನ ಬಿಟ್ಟು ಉಳಿದಿದ್ದನ್ನು ಯಾವ ರೀತಿ ಮಾರಾಟ ಮಾಡಿದ್ದೀರಿ ? ಇದನ್ನು ನಾನು ಸಚಿವರಿಂದ ತಿಳಿಯಬಯಸುತ್ತೇನೆ ಮತ್ತೆ ಕಳೆದಸಾರಿ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ೭೦೭೯೦೩೫೦೩೬೫೦೪೫೦೩೬೫೦೪೫೦೩೬೫೦೪

ಅಧ್ಯಕ್ಷರು.— ನಾನು ಆಗಲೇ ಯಡಿಯೂರಪ್ಪನವರಿಗೆ ಮತ್ತೆ ಅವಕಾಶ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಈಗ ನೀವು ಎದ್ದರೆ, ಎರಡು ಸಾರಿ ಅವಕಾಶ ಕೊಡಿ ಎಂದು ಹೇಳುತ್ತೀರಿ, ನೀವು ನನ್ನ ಕಡೆಗೂ ಸ್ವಲ್ಪ ನೋಡಬೇಕು. ಈ ರೀತಿ ಒಬ್ಬರಿಗೆ ಹೆಚ್ಚು ಅವಕಾಶ ಕೊಟ್ಟರೆ, ಬೇರೆ ಯವರೂ ಜಗಳ ಮಾಡುತ್ತಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಯಡಿಯೂರಪ್ಪನವರು ಧರಣಿ ಕುಳಿತಾಗ ನಾವು ಅವರಿಗೆ ಸಪೋರ್ಟ್ ಮಾಡಲಿಲ್ಲವೇ ? ಇದು ಪಾಲಿಟಿಕ್ಸ್‌ವಾದ ವಿಷಯ, ತಾವು ಎಲ್ಲದಕ್ಕೂ ಒಂದೇ ಮಂತ್ರ ಅನುಸರಿಸಿದರೆ ಹೇಗೆ ? ಇಂಪಾರ್ಟೆನ್ಸ್ ಇದ್ದರೆ ಕೊಡಿ...

ಅಧ್ಯಕ್ಷರು.— ನನಗೆ ಇದು ಇಂಪಾರ್ಟೆನ್ಸ್ ಎಂಬುದು ಗೊತ್ತಿದೆ. ಇಲ್ಲಿ ಎಲ್ಲಾ ಸದಸ್ಯರೂ ಮುಖ್ಯವಾದದ್ದನ್ನೇ ಹೇಳುತ್ತಾರೆ. ಆಯಿತು, ನೇರವಾಗಿ ಕೇಳಿ, ಉದ್ದುದ್ದ ಭಾಷಣ ಮಾಡುವುದು ಬೇಡ...

ಶ್ರೀ ಬಿ. ಲಕ್ಕಪ್ಪ.— ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ನನ್ನ ವೈಯಕ್ತಿಕವಾದುದು ಏನೂ ಇಲ್ಲ, ನಾನು ಹೆಚ್ಚು ಮಾತನಾಡುವುದೂ ಇಲ್ಲ, ಈಗ ಕೊಟ್ಟಿರತಕ್ಕ ವರದಿ ಏನಿದೆ, ಇದು ನೂರಕ್ಕೆ ನೂರರಷ್ಟು ಅಸತ್ಯದಿಂದ ಕೂಡಿದೆ. ಆದ್ದರಿಂದ ಅಲ್ಲಿ ನಡೆದಿರತಕ್ಕ ಅವ್ಯವಹಾರಗಳು ಬಯಲಿಗೆ ಬರಬೇಕು. ಸುಮಾರು ೭೯-೮೦ ಲಕ್ಷ ರೂಪಾಯಿಗಳ ದುರುಪಯೋಗವಾಗಿದೆ. ಸರ್ಕಾರದವರೇನೂ ಹೆಚ್ಚು ಮಾಡಬೇಕಾಗಿಲ್ಲ ಒಂದು ಎನ್‌ಕ್ವೈರಿ ಮಾಡಿಸಲಿ, ಎಸ್ಟಿಮೇಟ್ ಕಮಿಟಿಯಿಂದಲೋ ಅಥವಾ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದಲೋ ಎನ್‌ಕ್ವೈರಿ ಮಾಡಿಸಲಿ ಇದರಲ್ಲಿ ಅನ್ಯಾಯ ನಡೆದಿಲ್ಲ ಎಂದು ಹೇಳಿದರೆ, ನೀವು ಹೇಳಿದ ಶಿಕ್ಷೆಗೆ ಗುರಿಯಾಗುತ್ತೇನೆ. ಆದ್ದರಿಂದ, ಅಲ್ಲಿ ಅನ್ಯಾಯ ನಡೆದಿದೆ, ವಿಚಾರಣೆ ಮಾಡಿಸಲಿ, ಈ ಬಗ್ಗೆ ಆಶ್ವಾಸನೆ ಕೊಟ್ಟರೆ ಸಾಕು.

ಅಧ್ಯಕ್ಷರು.— ಮಾನ್ಯ ಕೃಷ್ಣ ಅವರೇ, ಎನ್‌ಕ್ವೈರಿ ಮಾಡಿಸಿ ಎಂದು ಹೇಳುತ್ತಾರೆ ಎನ್‌ಕ್ವೈರಿ ಮಾಡಿ, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿಸಿ...

ಶ್ರೀ ಕೃಷ್ಣ.— ಸರ್ಕಾರಿ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅಷ್ಟೇ ಈ ಕೆಲಸ ಮಾಡಿದ್ದರೆ, ಅದನ್ನು ನಾವು ಒಪ್ಪಬಹುದಿತ್ತು. ಆದರೆ ಅಲ್ಲಿ ಜವಾಬ್ದಾರಿ ಇರತಕ್ಕಂಥ ಸರ್ಕಾರಿ ಅಧಿಕಾರಿಗಳಂ ಬೋರ್ಡ್ ಆಫ್ ರೀಜೆಂಟ್‌ನಲ್ಲಿದ್ದಾರೆ, ಕೃಷಿಕರ ಪ್ರತಿನಿಧಿಗಳು ಇದ್ದಾರೆ, ಬಹಳ ಜವಾಬ್ದಾರಿ ಇರತಕ್ಕ ಜನ ಅದರಲ್ಲಿದ್ದಾರೆ...

ಅಧ್ಯಕ್ಷರು.— ನೀವು ಅದರ ಮೇಲೇ ಎನ್‌ಕ್ವೈರಿ ಮಾಡಿ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಎನ್‌ಕ್ವೈರಿ ಮಾಡಿಸಿ...

ಶ್ರೀ ಕೃಷ್ಣ.— ಅವರ ತೀರ್ಮಾನದ ಪ್ರಕಾರ ೪೯ ರೂಪಾಯಿ ಒಂದು ಪೈಸೆಗೆ ಟನ್‌ಗೆ ಆಗಬಹುದು. ಯಾವುದೇ ರೀತಿಯಲ್ಲಿ ನಿಜವಾದ ಭಾರವನ್ನು ತೂಗಿ ಎಷ್ಟಾಗುತ್ತದೆ ಎಂಬುದನ್ನು ನೋಡಿ ಕೊಂಡು ಮಾರಾಟ ಮಾಡಬೇಕೆಂದು ಇಟ್ಟುಕೊಂಡಿದ್ದಾರೆ. ಈ ಬಗ್ಗೆ ಹೆಚ್ಚಿನ ವಿವರಗಳು ಮಾನ್ಯ ಸದಸ್ಯರಲ್ಲಿ ಇದ್ದರೆ ಕಳುಹಿಸಿಕೊಡಲಿ. ಸರ್ಕಾರಕ್ಕೆ ಯಾವುದೇ ಅಧಿಕಾರಿಯನ್ನು ರಕ್ಷಣೆ ಮಾಡುವ ಉದ್ದೇಶ ಇಲ್ಲ. ಪ್ರಾಮಾಣಿಕವಾದ ವಿಚಾರಣೆ ಮಾಡಿಸಿ, ಅವರು ಯಾರೇ ಆಗಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು, ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಟ್ಟರೆ ವಿಚಾರಣೆ ಮಾಡಿಸುತ್ತೇವೆ.

ಶ್ರೀ ಬಿ. ಲಕ್ಕಪ್ಪ.— ಅನ್ಯಾಯವಾಗಿರುವ ಕಡೆ ತನಿಖೆ ಮಾಡಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಬೋರ್ಡ್ ಆಫ್ ರೀಜೆಂಟ್ಸ್ ಎಂದು ಹೇಳಿ, ಅವರು ಹೇಗೆ ಬೇಕಾದರೂ ಮಾಡಬಹುದೇ ? ೪ ಜನ ಅಧಿಕಾರಿಗಳು...

ಅಧ್ಯಕ್ಷರು.— ತಾವು ಕೂಡಿ, ಎರಡು ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಯೂನಿವರ್ಸಿಟಿ ಒಂದು ಆಟಾನಮಸ್ ಬಾಡಿ...ಅವರು ಮುಂದಿನ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಬಿ ಲಕ್ಕಪ್ಪ.— ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳುತ್ತೀರಾ ?

ಅಧ್ಯಕ್ಷರು.— ನೀವು ಬರೆದು ಕಳುಹಿಸಿ ಎನ್‌ಕ್ವೈರಿ ಮಾಡಿಸುತ್ತೇನೆಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು.— ಶ್ರೀ ಸಿ. ಎಂ. ರೇವಣ್ಣಸಿದ್ಧಯ್ಯ—ಮಾನ್ಯ ಸದಸ್ಯರ ಗೈರು ಹಾಜರಿ

೪ ಚಿಕ್ಕಬಳ್ಳಾಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಬಗ್ಗೆ

ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ) — ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಗ್ಲಿಷ್ ಹಾಗೂ ಭೌತಶಾಸ್ತ್ರದ ಉಪನ್ಯಾಸಕರು ಇಲ್ಲದಿರುವುದು, ಲ್ಯಾಬೊರೇಟರಿ ಕೊರತೆ, ಕಟ್ಟಡದ ಶಿಥಿಲತೆ ಈ ತೊಂದರೆಗಳ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳ ಗಮನ ಸೆಳೆಯಲು ಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು) — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ತಪ್ಪಿ ಆನುವಂಶಿಯನ್ನು ಪಡೆದು ಈ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಚಿಕ್ಕಬಳ್ಳಾಪುರದ ಈಗಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಈ ಮೊದಲು ಚಿಕ್ಕಬಳ್ಳಾಪುರದ ಪುರಸಭೆಯ ಆಡಳಿತದಲ್ಲಿದ್ದು ದಿನಾಂಕ. ೩೦–೧೦–೮೬ರಿಂದ ಸರ್ಕಾರ ವಹಿಸಿಕೊಂಡಿರುತ್ತದೆ. ಸದರಿ ಕಾಲೇಜು ಆಂಗ್ಲ ಭಾಷೆಯನ್ನು ಭೋದಿಸಲು ಅವಶ್ಯಕವಾದ ಶಿಕ್ಷಕರನ್ನು ಹೊಂದಿದ್ದು ಭೌತಶಾಸ್ತ್ರದಲ್ಲಿ ಇರುವ ೧೮ ಗಂಟೆಗೆ ಕಾರ್ಯಭಾರವನ್ನು ನಿರ್ವಹಿಸಲು ಅಂಶಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳುವಂತೆ, ಆ ಕಾಲೇಜಿನ ಪ್ರಾಂಶುಪಾಲರಿಗೆ ತಿಳಿಸಲಾಗಿದೆ. ಈ ಕಾಲೇಜನ್ನು ಸಧ್ಯಕ್ಕೆ ಇರುವ ಕಟ್ಟಡದಲ್ಲೇ ನಡೆಸಲಾಗುತ್ತಿದ್ದು ಕಟ್ಟಡದ ದುರಸ್ತಿಗಾಗಿ ಈಗಾಗಲೇ ರೂ. ೫.೦೦೦–೦೦ ಗಳನ್ನು ಖರ್ಚು ಮಾಡಲಾಗಿದ್ದು ಉಳಿದ ದುರಸ್ತಿಗಳಿಗೆ ಲೋಕೋಪಯೋಗಿ ಇಲಾಖೆಯನ್ನು ತುರ್ತಾಗಿ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಇಂದಿನವರೆಗೆ ಪ್ರಯೋಗ ಶಾಲೆಗೆ ಬೇಕಾದ ಉಪಕರಣಗಳನ್ನು ಕೊಳ್ಳಲು ರೂ. ೬೮,೦೦೦–೦೦ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮೊತ್ತ ಇಂದು ಬಿಡುಗಡೆಯಾದ ರೂ. ೧೫,೦೦೦–೦೦ನ್ನು ಒಳಗೊಂಡಿದೆ.

ಇಂಗ್ಲೀಷ್ ಮತ್ತು ಭೌತಶಾಸ್ತ್ರ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಆಗತ್ಯ ಬೋಧನೆ ಒದಗಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು ನಿಯೋಜನೆ ಮೇರೆಗೆ ಸದರಿ ವಿಷಯಗಳಿಗೆ ಅಧ್ಯಾಪಕರನ್ನು ನೇಮಿಸಲಾಗುವುದು.

† ಶ್ರೀ ಕೆ.ಎಂ. ಮುನಿಯಪ್ಪ.—ಮಾನ್ಯ ಅಧ್ಯಕ್ಷರೇ, ಈ ಕಾಲೇಜನ್ನು ೨೦ ವರ್ಷಗಳ ಹಿಂದೆ ಪುರಸಭೆಯವರು ಸ್ಥಾಪನೆ ಮಾಡಿದರು. ನಂತರ ಮಾನ್ಯ ಸಚಿವರು ಹೇಳಿದಹಾಗೆ ೧೯೮೬ರ ಆಕ್ಟೋಬರ್‌ನಲ್ಲಿ ಇದನ್ನು ಸರ್ಕಾರ ವಹಿಸಿಕೊಂಡಿತು. ಸರ್ಕಾರ ವಹಿಸಿಕೊಂಡ ಮೇಲೆ ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೬೪೦ ಆಗಿದೆ. ೬೦ ಜನ ಉಪನ್ಯಾಸಕರು ಇದ್ದಾರೆ. ನಾನು ಮಂತ್ರಿಯಾಗಿದ್ದಾಗ, ಹೋದಸಾರಿ ಯಾರನ್ನೂ ಅಲ್ಲಿಂದ ವರ್ಗಾವಣೆ ಮಾಡಬಾರದು ಎಂದು ಬರೆದೆ. ಆದರೂ ಕಳೆದ ಸಾರಿ ಎಂಟು ಜನರನ್ನು ವರ್ಗಾವಣೆ ಮಾಡಿದರು. ಈ ಸಾರಿ ೧೮ ಜನರನ್ನು ವರ್ಗಾವಣೆ ಮಾಡಿದರು. ಒಟ್ಟು ೨೬ ಜನರನ್ನು ವರ್ಗಾವಣೆ ಮಾಡಿದರು, ಈಗ ೩೨ ಜನ ಉಪನ್ಯಾಸಕರು ಮಾತ್ರ ಅಲ್ಲಿದ್ದಾರೆ. ಇದರಲ್ಲಿ ಮುಖ್ಯವಾಗಿ ಇಂಗ್ಲೀಷ್ ಮತ್ತು ಭೌತಶಾಸ್ತ್ರದ ಉಪನ್ಯಾಸಕರು ಇಲ್ಲ, ಒಬ್ಬ ಇಂಗ್ಲೀಷ್ ಉಪನ್ಯಾಸಕರು ಇದ್ದಾರೆ. ಎರಡೂ ವರ್ಷದಿಂದ ಅವರಿಗೆ ಮಾನಸಿಕವಾದ ಕಾಯಿಲೆಯಾಗಿ ಅವರು ಹೊರಗೆ ಬರುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ವಿದ್ಯಾರ್ಥಿಗಳು ಕಳೆದು ತಿಂಗಳು ಪ್ರತಿಭಟನಾ ಚಳುವಳಿಯನ್ನು ಮಾಡಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿದರು. ವಿದ್ಯಾಮಂತ್ರಿಗಳಿಗೆ ಧಿಕ್ಕಾರ ಹಾಕಿದರು. ನನಗೂ ಧಿಕ್ಕಾರ ಹೇಳಿದರು. ವಿದ್ಯಾರ್ಥಿಗಳು ಮತ್ತೆ ಪ್ರತಿಭಟನೆ ಮಾಡುತ್ತಿದ್ದಾರೆ. ಅವರು ೧೫ ಬೇಡಿಕೆಗಳನ್ನು ಕೊಟ್ಟಿದ್ದಾರೆ. ಕಾಲೇಜ್ ಬಿಲ್ಡಿಂಗ್ ಶಿಥಿಲವಾಗಿದೆ. ಹೋದಸಾರಿ ಮಳೆ ಬಂದಾಗ ಕಾಲೇಜ್ ಬಿಲ್ಡಿಂಗ್‌ನ ಕೆಲವು ಕಟ್ಟಡಗಳು ಬಿದ್ದು ಹೋದವು. ಪಿಡಬ್ಲ್ಯೂಡಿಯವರು ಏನು ಹೇಳುತ್ತಾರೆ ಎಂದರೆ, ಇದು ಕಾಲೇಜ್ ನಡೆಸುವುದಕ್ಕೇ ಲಾಯಕ್ಕಾಗಿಲ್ಲ ಎಂದು ಒಂದು